# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1515 |
| ಮಾನ್ಯ ಸದಸ್ಯರ ಹೆಸರು | : | ಡಾ॥ ಎಂ ಜಿ ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು. |

| ಕ್ರ. ಸಂ: | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನೀತಿಯಡಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕಾ ಕ್ಲಸ್ಟರ್‌ಗಳ ಒಟ್ಟು ಸಂಖ್ಯೆ ಎಷ್ಟು; (ಉದಾಹರಣೆಗೆ; Bidriware, ಬೇಳೆ ಸಂಸ್ಕರಣೆ, ಇಂಜಿನಿಯರಿಂಗ್ ಇತ್ಯಾದಿ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಆಟೋಮೊಬೈಲ್ ಸರ್ವೀಸಿಂಗ್‌ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ MSE-CDP ಯೋಜನೆಯಡಿಯಲ್ಲಿ ಆಟೋ ಕ್ಲಸ್ಟರ್ ಸ್ಥಾಪಿತವಾಗಿ ಚಾಲ್ತಿಯಲ್ಲಿರುತ್ತದೆ. |
| (ಆ) | ಈ ಕ್ಲಸ್ಟರ್‌ಗಳ ವ್ಯಾಪ್ತಿಯಲ್ಲಿ ಉದ್ದಿಮೆದಾರರಿಗೆ ಒದಗಿಸಲಾದ ರಸ್ತೆ, ವಿದ್ಯುತ್ ಸಂಪರ್ಕ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಗೋದಾಮು ಹಾಗೂ ಸಾಮಾನ್ಯ ಶೆಡ್‌ಗಳಂತಹ ಮೂಲಸೌಕರ್ಯಗಳ ಪ್ರಸ್ತುತ ಸ್ಥಿತಿಗತಿ ಏನು; ಕಳೆದ ಎರಡು ವರ್ಷಗಳಲ್ಲಿ ಈ ಸೌಲಭ್ಯಗಳ ಉನ್ನತೀಕರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ವೆಚ್ಚದ ವಿವರವೇನು; | ಕೇಂದ್ರ ಸರ್ಕಾರದ ಎಂ.ಎಸ್.ಇ-ಸಿ.ಡಿ.ಪಿ. ಯೋಜನೆಯ ಮೂಲಭೂತ ಸೌಕರ್ಯಾಭಿವೃದ್ಧಿ ಯೋಜನೆಯಡಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಬೀದರ್ ಜಿಲ್ಲೆಯಲ್ಲಿನ ಈ ಕೆಳಕಂಡ ಕೈಗಾರಿಕಾ ವಸಾಹತುಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ. ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಲು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>(ರೂ.ಲಕ್ಷಗಳಲ್ಲಿ)<br>ಕೈಗಾರಿಕಾ ವಸಾಹತು \| ಜಾಗ (ಎಕರೆ) \| ಯೋಜನಾ ವೆಚ್ಚ \| ರಾಜ್ಯ ಸರ್ಕಾರದ ಅನುದಾನ \| ಕೇಂದ್ರ ಸರ್ಕಾರದ ಅನುದಾನ<br>ಹುಮ್ನಾಬಾದ್ ಕೈಗಾರಿಕಾ ವಸಾಹತು \| 22 \| 515.00 \| 257.50 \| 257.50<br>ಕೊಲ್ಹಾರ್ ಕೈಗಾರಿಕಾ ವಸಾಹತು ಬೀದರ್ \| 29.75 \| 510.00 \| 255.00 \| 255. |

| | | |
|---|---|---|
| (ಇ) | ಬೀದರ್‌ನ ಸಾಂಪ್ರದಾಯಿಕ ಉತ್ಪನ್ನಗಳಾದ Bidriware ಮತ್ತು ದಾಲ್ (ಬೇಳೆ) ಉತ್ಪನ್ನಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚಿಸಲು ಬ್ರ್ಯಾಂಡಿಂಗ್, GI ಟ್ಯಾಗ್ ಪ್ರಚಾರ ಡಿಜಿಟಲ್ ಮಾರುಕಟ್ಟೆ (E-Commerce) ರಫ್ತು ಪ್ರೋತ್ಸಾಹ ಯೋಜನೆಗಳಡಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; | ಜಿಲ್ಲೆಯಲ್ಲಿ 130 ಬಿದ್ರಿ ಘಟಕಗಳಿಗೆ GI ಟ್ಯಾಗ್ ಪಡೆದಿದ್ದು, ಈ ಉತ್ಪನ್ನಗಳಿಗೆ ಆನ್‌ಲೈನ್ ಮಾರ್ಕೆಟಿಂಗ್‌ಗೆ ಪ್ರೋತ್ಸಾಹ, ಕೇಂದ್ರ ಸರ್ಕಾರದ ಇಂಡಿಯಾ ಹ್ಯಾಂಡ್‌ಮೇಡ್ ಪೋರ್ಟಲ್‌ನಲ್ಲಿ ಮಾರುಕಟ್ಟೆಗೆ ಬಿದ್ರಿ ಉತ್ಪನ್ನಗಳನ್ನು ಅಳವಡಿಸಲಾಗಿದೆ.<br><br>ಕೇಂದ್ರ ಸರ್ಕಾರದ RAMP ಯೋಜನೆಯಡಿಯಲ್ಲಿ ಬ್ರ್ಯಾಂಡಿಂಗ್ ಕಾರ್ಯಕ್ರಮ ಹಮ್ಮಿಕೊಳ್ಳಲು ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದೆ.<br><br>ಬೀದರ್‌ನ Bidriware ಮತ್ತು ದಾಲ್ (ಬೇಳೆ) ಉತ್ಪನ್ನಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚಿಸಲು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸುವ ಉತ್ಪಾದಕರಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| (ಈ) | ಕ್ಲಸ್ಟರ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ ಉದ್ದಿಮೆದಾರರಿಗೆ ದುಬಾರಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸಲು 'ಸಾಮೂಹಿಕ ಸೌಲಭ್ಯ ಕೇಂದ್ರ' (Common Facility Center-CFC) ಸ್ಥಾಪಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ ಬೀದರ್ ಜಿಲ್ಲೆಯಲ್ಲಿ ಈವರೆಗೆ ಎಷ್ಟು CFC ಕಾರ್ಯಾರಂಭ ಮಾಡಿವೆ ಮತ್ತು ಅವುಗಳ ಸೌಲಭ್ಯಗಳ ವಿವರವೇನು; | ಕೇಂದ್ರ ಸರ್ಕಾರದ MSE-CDP ಯೋಜನೆಯಡಿ ಕ್ಲಸ್ಟರ್‌ಗಳಲ್ಲಿ CFC ಈಗಾಗಲೇ ಆಟೋ ಕ್ಲಸ್ಟರ್ ಸ್ಥಾಪಿತವಾಗಿದೆ. ಅಲ್ಲಿ CFC ಕಾರ್ಯ ನಿರ್ವಹಿಸುತ್ತಿದೆ. ಸದರಿ CFCಯಲ್ಲಿ ಆಟೋ ಮೊಬೈಲ್ ಸರ್ವೀಸಿಂಗ್‌ಗೆ ಸಂಬಂಧಿಸಿದಂತೆ ವಾಹನದ ಇಂಜಿನ್‌ಗಳ ಸಂಪೂರ್ಣವಾದ ಸರ್ವೀಸಿಂಗ್ ಕಾರ್ಯ ಮತ್ತು ವಾಹನದ ಪೇಂಟಿಂಗ್ ಕಾರ್ಯಕ್ಕೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ.<br><br>ಕೇಂದ್ರ ಸರ್ಕಾರದ ಎಂ.ಎಸ್.ಇ-ಸಿ.ಡಿ.ಪಿ. ಯೋಜನೆಯಡಿ ಸಾಮಾನ್ಯ ಸೌಲಭ್ಯ ಕೇಂದ್ರಗಳಲ್ಲಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಅವಕಾಶವಿರುವುದಿಲ್ಲ. ಆದರೆ, ಸಾಮಾನ್ಯ ಸೌಲಭ್ಯ ಕೇಂದ್ರಗಳಲ್ಲಿ ಅಳವಡಿಸಲಾಗಿರುವ ಯಂತ್ರೋಪಕರಣ /ಸೌಲಭ್ಯಗಳನ್ನು ಎಂ ಎಸ್ ಎಂ ಇ ಘಟಕಗಳು ಸೇವಾ ಶುಲ್ಕ ನೀಡಿ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.<br><br>ಕೇಂದ್ರ ಸರ್ಕಾರದ ಎಂಎಸ್‌ಇ-ಸಿಡಿಪಿ ಯೋಜನೆಯಡಿ ಆಟೋ ಕ್ಲಸ್ಟರ್‌ನ ಸಾಮಾನ್ಯ ಸೌಲಭ್ಯ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ. ಸೌಲಭ್ಯಗಳ ವಿವರಗಳು ಕೆಳಗಿನಂತಿವೆ.<br>• Engine & Major repair section.<br>• Dismantling, Testing, Calibration Section.<br>• Training Design & Research center.<br>• Final Fitment and testing section.<br>• Fitting center, Gear box, workshop & Emergency section. |

| | | |
|---|---|---|
| (ಉ) | ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ಕೈಗಾರಿಕಾ ಕ್ಲಸ್ಟರ್‌ಗಳ ಅಭಿವೃದ್ಧಿ, ಮೂಲಸೌಕರ್ಯ ವೃದ್ಧಿ ಹಾಗೂ ತಾಂತ್ರಿಕ ನವೀಕರಣ (Technology Upgradation) ಗಾಗಿ ಸರ್ಕಾರದಿಂದ ಮೀಸಲಾದ ಒಟ್ಟು ಅನುದಾನ ಎಷ್ಟು; ಅದರಲ್ಲಿ ವಾಸ್ತವವಾಗಿ ಬಿಡುಗಡೆಯಾದ ಮತ್ತು ಬಳಕೆಯಾದ ಮೊತ್ತ ಎಷ್ಟು; (ವರ್ಷವಾರು ಹಾಗೂ ಯೋಜನಾವಾರು ಮಾಹಿತಿ ನೀಡುವುದು)? | ಕೇಂದ್ರ ಸರ್ಕಾರದ ಎಂಎಸ್‌ಇ-ಸಿಡಿಪಿ ಯೋಜನೆಯಡಿ ಬೀದರ್‌ನಲ್ಲಿ ಅನುಷ್ಠಾನಗೊಂಡಿರುವ ಆಟೋ ಕ್ಲಸ್ಟರ್‌ಗೆ ಕಳೆದ ಮೂರು ವರ್ಷಗಳಲ್ಲಿ ತಂತ್ರಜ್ಞಾನ ನವೀಕರಣಕ್ಕಾಗಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. |

**ಸಿಐ 42 ಎಸ್‌ಎಸ್‌ಐ 2026**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು